## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1411 |
| 2) | ಮಾನ್ಯ ಪರಿಷತ್ ಸದಸ್ಯರ ಹೆಸರು | ಶ್ರೀ ರಾಮೋಜಿ ಗೌಡ<br>(ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 16.03.2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಪ್ರಸ್ತುತ ನಿರುದ್ಯೋಗ ದರ ಎಷ್ಟು ಇದೆ: (ಜಿಲ್ಲಾವಾರು ವಿವರ ನೀಡುವುದು) | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>ಕರ್ನಾಟಕ ಆರ್ಥಿಕ ಸಮೀಕ್ಷೆ 2026 ರನ್ವಯ ರಾಜ್ಯದಲ್ಲಿ ಶೇ 2.8 ನಿರುದ್ಯೋಗ ದರ ದಾಖಲಾಗಿದ್ದು, ಇದು ಅಖಿಲ ಭಾರತ ಮಟ್ಟದ ಸರಾಸರಿ ಶೇ 5.2 ಕ್ಕಿಂತ ಕಡಿಮೆಯಾಗಿದೆ. ಜಿಲ್ಲಾವಾರು ವಿವರ ಲಭ್ಯವಿರುವುದಿಲ್ಲ. |
| (ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು: ಅವುಗಳನ್ನು ಯಾವಾಗ ಭರ್ತಿ ಮಾಡಲಾಗುತ್ತದೆ: (ವಿವರ ನೀಡುವುದು) | **ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಯಿಂದ ಪಡೆದಿರುವ ಮಾಹಿತಿ**<br>ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ: 2,84,881 ಈ ಖಾಲಿ ಹುದ್ದೆಗಳ ಪೈಕಿ ಕೆಲವು ಗ್ರೂಪ್-ಡಿ ಹಾಗೂ ಗ್ರೂಪ್-ಸಿ ವೃಂದದ 96,844 ಹುದ್ದೆಗಳನ್ನು ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದ್ದು, ಒಟ್ಟು 1,88,037 ಹುದ್ದೆಗಳು ಖಾಲಿ ಇರುತ್ತವೆ. ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ದಿನಾಂಕ: 27-2-2026 ರ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸಹಿಮ 2026 ರಲ್ಲಿ ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳಲ್ಲಿ ಸುಮಾರು 56432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಂದಿನ 30 ದಿನಗಳಲ್ಲಿ ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳಿಗೆ /ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ) ಎಷ್ಟು ಉದ್ಯೋಗ ಮೇಳವನ್ನು Job Fairs ಆಯೋಜಿಸಲಾಗಿದೆ: ಅದರಿಂದ ಎಷ್ಟು ಮಂದಿಗೆ ಉದ್ಯೋಗ ದೊರೆತಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>2025-26 ನೇ ಸಾಲಿನಲ್ಲಿ 504 ನೇರಸಂದರ್ಶನ / ಮಿನಿ ಉದ್ಯೋಗ ಮೇಳಗಳನ್ನು ಆಯೋಜಿಸಿದ್ದು, ಆ ಮೂಲಕ 8676 ಅಭ್ಯರ್ಥಿಗಳು ಉದ್ಯೋಗ ಆಹ್ವಾನ ಪತ್ರ ಪಡೆದಿರುತ್ತಾರೆ. ಜಿಲ್ಲಾವಾರು ವಿವರವನ್ನು **ಅನುಬಂಧ-3** ರಲ್ಲಿ ನೀಡಿದೆ. |

| | |
|---|---|
| | **<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>**<br>**<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ</u>**<br>**<u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / (DAY-NRLM)</u>**<br><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತಿಗಳ ಮೂಲಕ ಉದ್ಯೋಗ ಮೇಳಗಳನ್ನು ಆಯೋಜಿಸಿ ಯುವಕ/ಯುವತಿಯರಿಗೆ ಉದ್ಯೋಗಗಳನ್ನು ಒದಗಿಸಲಾಗುತ್ತಿದೆ.<br>ಪ್ರಸ್ತುತ 2025-26ನೇ ಸಾಲಿನಲ್ಲಿ 18 ಜಿಲ್ಲೆಗಳಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದ್ದು, ಒಟ್ಟು 106186 ಅಭ್ಯರ್ಥಿಗಳು ನೊಂದಾವಣಿ ಮಾಡಿಕೊಂಡಿದ್ದು ಅವರಲ್ಲಿ10132 ಅಭ್ಯರ್ಥಿಗಳಿಗೆ ಸ್ಥಳದಲ್ಲೇ ಉದ್ಯೋಗ ಆಯ್ಕೆ ಆದೇಶಗಳನ್ನು ಒದಗಿಸಲಾಗಿರುತ್ತದೆ. ಉದ್ಯೋಗ ಮೇಳದ ಪ್ರಗತಿಯ ಜಿಲ್ಲಾವಾರು ವಿವರವನ್ನು **ಅನುಬಂಧ-4** ರಲ್ಲಿ ನೀಡಿದೆ.<br><br>**<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ.)</u>**<br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಇದುವರೆವಿಗೂ 31 ಉದ್ಯೋಗ ಮೇಳವನ್ನು ಕೈಗೊಂಡಿದ್ದು, 54,701 ಅಭ್ಯರ್ಥಿಗಳು Shortlist ಗೊಂಡಿದ್ದು, 26657 ಅಭ್ಯರ್ಥಿಗಳು ಉದ್ಯೋಗಾವಕಾಶವನ್ನು ಪಡೆಯಲು ಯಶಸ್ವಿಯಾಗಿರುತ್ತಾರೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ – 5** ರಲ್ಲಿ ನೀಡಿದೆ) |
| ಈ) ಖಾಸಗಿ ಕ್ಷೇತ್ರದ ಸಹಕಾರದಿಂದ ಅಡಿಯಲ್ಲಿ ಬರುತ್ತವೆಯೇ: (ಮಾಹಿತಿ ನೀಡುವುದು) | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ.)</u>**<br><br>ಸದರಿ ಉದ್ಯೋಗ ಮೇಳಗಳನ್ನು ಸರ್ಕಾರದ ನಿರ್ದೇಶನ ಹಾಗೂ ಆದೇಶಗಳಂತೆ ಸರ್ಕಾರಿ ಅನುಮೋದಿತ ಸಂಸ್ಥೆಯ ಮುಖೇನ ಸೇವೆಯನ್ನು ಪಡೆಯಲಾಗಿರುತ್ತದೆ. |
| ಉ) ಪದವಿ ಮತ್ತು ತಾಂತ್ರಿಕ ಶಿಕ್ಷಣ ಪಡೆದ ಯುವಕರಿಗೆ ಸಮರ್ಪಕ ಉದ್ಯೋಗವಕಾಶಗಳ ಕೊರತೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ: ತೆಗೆದುಕೊಂಡ ಕ್ರಮಗಳೇನು: | **<u>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ</u>**<br>ಹೌದು<br>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಒದಗಿಸಲು ಜಿಲ್ಲಾಮಟ್ಟದಲ್ಲಿ ಮಿನಿ ಉದ್ಯೋಗಮೇಳ / ನೇರ ಸಂದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>**<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ.)</u>**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಯುವನಿಧಿ ಪ್ಲಸ್ ಕಾರ್ಯಕ್ರಮದಡಿ ಯುವನಿಧಿ ಯೋಜನೆಗೆ ನೋಂದಾಯಿಸಿಕೊಂಡ ಫಲಾನುಭವಿಗಳಿಗೆ ಆದ್ಯತೆ ಮೇರೆಗೆ ಪರಿಗಣಿಸಿ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. |

| | |
|---|---|
| | ಪ್ರಸಕ್ತ ಸಾಲಿನಲ್ಲಿ ಸರ್ಕಾರದ ಕ್ರಿಯಾ ಯೋಜನೆಯ ಆದೇಶದನ್ವಯ Industry Linkage Cell (ILC) & Future Skills ಕಾರ್ಯಕ್ರಮದ ಮುಖೇನ 3510 ಅಭ್ಯರ್ಥಿಗಳಿಗೆ ಹಾಗೂ ವಿವಿಧ ಖಾಸಗಿ ತರಬೇತಿದಾರ ಸಂಸ್ಥೆಗಳ ಮುಖೇನ 1830 ಅಭ್ಯರ್ಥಿಗಳಿಗೆ ಮತ್ತು ಸರ್ಕಾರಿ ತರಬೇತಿದಾರ ಸಂಸ್ಥೆಗಳ (ಜಿ.ಟಿ.ಟಿ.ಸಿ / ಐ.ಟಿ.ಐ/ ಕೆ.ಜಿ.ಟಿ.ಟಿ.ಐ/ಮೋಕ್ಷಗುಂಡಂ/ ಸಿಡಾಕ್ ಮತ್ತು ಇತರೆ) ಮುಖೇನ 9400 ಅಭ್ಯರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿಯನ್ನು ಕೈಗೊಳ್ಳುವ ಗುರಿಯೊಂದಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. (ವಿವರವನ್ನು **ಅನುಬಂಧ-6** ರಲ್ಲಿ ನೀಡಿದೆ). |
| ಊ) ಸ್ಟಾರ್ಟ್ ಅಪ್ ಮತ್ತು ಸ್ವ-ಉದ್ಯೋಗ ಪ್ರೋತ್ಸಾಹ ಯೋಜನೆಗಳಿಂದ ಎಷ್ಟು ಯುವಕರು ಲಾಭ ಪಡೆದಿದ್ದಾರೆ? (ಮಾಹಿತಿ ನೀಡುವುದು) | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ.)</u>**<br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯದ ಯುವಕ ಯುವತಿಯರಿಗೆ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವುದರೊಂದಿಗೆ ಉದ್ಯೋಗಾವಕಾಶ ಹಾಗೂ ಸ್ವಉದ್ಯೋಗಕ್ಕೆ ಅವಕಾಶ ಕಲ್ಪಿಸಲಾಗುತ್ತಿದ್ದು, ಸ್ಟಾರ್ಟ್ ಅಪ್ ಮತ್ತು ಸ್ವ-ಉದ್ಯೋಗ ಪ್ರೋತ್ಸಾಹ ನೀಡುವಂತಹ ಯಾವುದೇ ಯೋಜನೆಗಳು ನಿಗಮದಲ್ಲಿ ಜಾರಿಯಲ್ಲಿರುವುದಿಲ್ಲ.<br><br>**<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ (DAY-NRLM)</u>**<br><br>ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮೂಲಕ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರ ಯೋಜನೆ (R-SETI) ಯಡಿ ರಾಜ್ಯದಲ್ಲಿ 2013-14 ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಅನುಷ್ಠಾನಗೊಳಿಲಾಗುತ್ತಿದ್ದು, ನಿರುದ್ಯೋಗ ಯುವಕ-ಯುವತಿಯರಿಗೆ ಪ್ರಸ್ತುತ 32 ಕೇಂದ್ರಗಳಡಿ ವಸತಿ ಸಹಿತ ಮತ್ತು ವಸತಿ ರಹಿತ ಕೌಶಲ್ಯ ತರಬೇತಿಯನ್ನು ಒದಗಿಸಿ, ತರಬೇತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರವನ್ನು ಒದಗಿಸಿ ಬ್ಯಾಂಕ್ ಲಿಂಕೇಜ್ ಸೌಲಭ್ಯ ಪಡೆಯಲು ಬೆಂಬಲಿಸುವ ಮೂಲಕ ಸ್ವ-ಉದ್ಯೋಗ ಕೈಗೊಳ್ಳಲು ಬೆಂಬಲಿಸಲಾಗುತ್ತಿದೆ.<br><br>ಮುಂದುವರೆದು,ಸದರಿ ಯೋಜನೆ ಅಡಿ 2013-14 ರಿಂದ ಪ್ರಸ್ತುತದವರೆಗೆ ಪ್ರಯೋಜನ ಪಡೆದಿರುವ ಅಭ್ಯರ್ಥಿಗಳ ವಿವರ ಈ ಕೆಳಗಿನಂತಿದೆ.<br><br>ತರಬೇತಿ ಹೊಂದಿದವರ ಸಂಖ್ಯೆ: **431742**<br>ಸ್ವ-ಉದ್ಯೋಗ ನಿರ್ವಹಿಸುತ್ತಿರುವವರ ಸಂಖ್ಯೆ: **293897**<br><br>**<u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)</u>**<br><br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಸಂಸ್ಥೆಯಿಂದ ಸ್ವ-ಉದ್ಯೋಗ ಪ್ರಾರಂಭಿಸುವ ನಿಟ್ಟಿನಲ್ಲಿ ಉದ್ಯಮಶೀಲತಾಭಿವೃದ್ಧಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ 18679 ಜನರು ತರಬೇತಿಯ ಲಾಭ ಪಡೆದಿರುತ್ತಾರೆ. |

**ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ**

ಸ್ಟಾರ್ಟ್ ಅಪ್ ಮತ್ತು ಸ್ವ-ಉದ್ಯೋಗ ಪ್ರೋತ್ಸಾಹ ಯೋಜನೆಗಳಿಂದ ಲಾಭ ಪಡೆದ ಯುವಕರ ಮಾಹಿತಿ ಕೆಳಕಂಡಂತಿದೆ:

- **ಎಲಿವೇಟ್ (ಐಡಿಯು2ಪಿಒಸಿ) ಗ್ರಾಂಟ್-ಇನ್ –ಏಡ್:**

  ಆರಂಭಿಕ ಹಂತದ ಪರಿಕಲ್ಪನೆಯ ಪುರಾವೆ (ಪ್ರೂಫ್-ಆಫ್-ಕಾನ್ಸೆಪ್ಟ್) ಅಭಿವೃದ್ಧಿಗಾಗಿ ಅರ್ಹ ನವೋದ್ಯಮಗಳಿಗೆ ರೂ. 50 ಲಕ್ಷಗಳವರೆಗೆ ಅನುದಾನವನ್ನು ನೀಡಲಾಗುತ್ತದೆ. ಈ ಯೋಜನೆಯ ಅಡಿಯಲ್ಲಿ ಒಟ್ಟು 1250 ನವೋದ್ಯಮಿಗಳಿಗೆ ರೂ.292.5713 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

- **ರಾಜೀವ್ ಗಾಂಧಿ ಉದ್ಯಮಶೀಲತೆ ಕಾರ್ಯಕ್ರಮ (RGEP):**

  ಮೂಲಮಾದರಿ ಅಭಿವೃದ್ಧಿಗಾಗಿ ಯುವ ನಾವೀನ್ಯಕಾರರಿಗೆ ಆರಂಭಿಕ ಹಂತದ ಆರ್ಥಿಕ ಬೆಂಬಲವಾಗಿ 12 ತಿಂಗಳ ಅವಧಿಗೆ ಮಾಸಿಕ ರೂ.25,000 ಗಳ ಸ್ಟೈಫಂಡ್ ಅನ್ನು ಒದಗಿಸಲಾಗುತ್ತದೆ. ಈ ಯೋಜನೆಯ ಅಡಿಯಲ್ಲಿ ಒಟ್ಟು 60 ನಾವೀನ್ಯಕಾರರನ್ನು ಆಯ್ಕೆ ಮಾಡಲಾಗಿದ್ದು, ಅವರಿಗೆ ಒಟ್ಟು ರೂ.2 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

- **ಗ್ರಾಸ್‌ರೂಟ್ ಇನ್ನೋವೇಶನ್:**

  ರೈತರು, ಕುಶಲ ಕರ್ಮಿಗಳು, ಕಾರ್ಮಿಕರು ಮತ್ತು ತಂತ್ರಜ್ಞರಂತಹ ನಾವೀನ್ಯಕಾರರಿಗೆ ಅವರ ತಂತ್ರಜ್ಞಾನಗಳನ್ನು ಪರಿಷ್ಕರಿಸುವಲ್ಲಿ ಮತ್ತು ಅವರ ಪರಿಹಾರಗಳನ್ನು ವಾಣಿಜ್ಯೀಕರಣದತ್ತ ಸಾಗಿಸುವಲ್ಲಿ ಬೆಂಬಲ ನೀಡುವ ಕಾರ್ಯಸಾಧ್ಯ ಯೋಜನೆಗಳಿಗೆ ಗರಿಷ್ಠ ರೂ.4 ಲಕ್ಷದವರೆಗೆ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತದೆ. ಈ ಯೋಜನೆಯ ಅಡಿಯಲ್ಲಿ 44 ನಾವೀನ್ಯಕಾರರನ್ನು ಆಯ್ಕೆ ಮಾಡಲಾಗಿದ್ದು, ಅವರಿಗೆ ಒಟ್ಟು ರೂ.1.76 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ನವೋದ್ಯಮಗಳು ನಿರಂತರವಾಗಿ ಮತ್ತು ಯಶಸ್ವಿಯಾಗಿ ಕಾರ್ಯನಿರ್ವಹಿಸಲು, ರಾಜ್ಯ ಸರ್ಕಾರವು ಕರ್ನಾಟಕ ನವೋದ್ಯಮ ನೀತಿಯಡಿ ವಿವಿಧ ಪ್ರೋತ್ಸಾಹಕಗಳನ್ನು ನೀಡುತ್ತಿದೆ. ಇಲ್ಲಿಯವರೆಗೆ ಒಟ್ಟು 80 ನವೋದ್ಯಮಗಳಿಗೆ ಪ್ರೋತ್ಸಾಹಕ ಬೆಂಬಲ ಪಡೆದಿವೆ.

ಸಂಖ್ಯೆ: ಕೌಉಜೀಇ 06 ಕೌಗುಪ್ರ 2026

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

## ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1236 (1411) ಮಾಹಿತಿ**

**ಇಲಾಖಾವಾರು ಹಾಗೂ ವರ್ಗವಾರು ಖಾಲಿಯಿರುವ ಹುದ್ದೆಗಳ ಸಂಖ್ಯೆ**

| ಕ್ರಮ ಸಂಖ್ಯೆ | ಇಲಾಖೆ | ಖಾಲಿ ಹುದ್ದೆಗಳು | | | | | ಗುತ್ತಿಗೆ / ಹೊರಗುತ್ತಿಗೆಯಿಂದ ಭರ್ತಿ ಮಾಡಿದ ಹುದ್ದೆಗಳು | ನಿವ್ವಳ ಖಾಲಿ ಹುದ್ದೆಗಳು |
|---|---|---|---|---|---|---|---|---|
| | | A | B | C | D | ಒಟ್ಟು ಖಾಲಿ ಹುದ್ದೆಗಳು | | |
| 1 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 1127 | 7231 | 66895 | 4441 | 79694 | 208 | **79486** |
| 2 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | 2522 | 1221 | 19721 | 14108 | 37572 | 27248 | **10324** |
| 3 | ಒಳಾಡಳಿತ | 435 | 608 | 25194 | 1951 | 28188 | 1570 | **26618** |
| 4 | ಉನ್ನತ ಶಿಕ್ಷಣ | 4355 | 134 | 4001 | 5109 | 13599 | 2724 | **10875** |
| 5 | ಪಶುಸಂಗೋಪನ | 1507 | 60 | 3259 | 6194 | 11020 | 3403 | **7617** |
| 6 | ಕಂದಾಯ | 107 | 344 | 6501 | 3915 | 10867 | 15376 | **-4509** |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 492 | 640 | 7695 | 1677 | 10504 | 2744 | **7760** |
| 8 | ಪರಿಶಿಷ್ಟ ಜಾತಿಗಳ ಕಲ್ಯಾಣ | 68 | 63 | 1513 | 8002 | 9646 | 6515 | **3131** |
| 9 | ಹಿಂದುಳಿದ ವರ್ಗಗಳ ಕಲ್ಯಾಣ | 28 | 145 | 1740 | 6612 | 8525 | 5686 | **2839** |
| 10 | ಆರ್ಥಿಕ | 311 | 446 | 4871 | 2040 | 7668 | 3314 | **4354** |
| 11 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 2762 | 152 | -230 | 4975 | 7659 | 2286 | **5373** |
| 12 | ಕೃಷಿ | 74 | 3336 | 2259 | 1207 | 6876 | 2759 | **4117** |
| 13 | ಅರಣ್ಯ | 98 | 203 | 3979 | 2198 | 6478 | 3579 | **2899** |
| 14 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 347 | 263 | 3834 | 1746 | 6190 | 1603 | **4587** |
| 15 | ಅಲ್ಪಸಂಖ್ಯಾತರ ಕಲ್ಯಾಣ | 86 | 620 | 1881 | 2385 | 4972 | 5753 | **-781** |
| 16 | ಸಹಕಾರ | 31 | 84 | 3454 | 1157 | 4726 | 337 | **4389** |
| 17 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 98 | 471 | 2173 | 1268 | 4010 | 545 | **3465** |
| 18 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 144 | 193 | 2115 | 939 | 3391 | 2794 | **597** |

| | | | | | | | | |
|---|---|---|---|---|---|---|---|---|
| 19 | ರೇಷ್ಮೆ | 19 | 278 | 2661 | 379 | 3337 | 88 | **3249** |
| 20 | ತೋಟಗಾರಿಕೆ | 22 | 4 | -239 | 3127 | 2914 | 467 | **2447** |
| 21 | ಕಾರ್ಮಿಕ | 370 | 83 | 1212 | 1003 | 2668 | 1305 | **1363** |
| 22 | ಪರಿಶಿಷ್ಟ ಪಂಗಡಗಳ ಕಲ್ಯಾಣ | 12 | 17 | 761 | 1645 | 2435 | 1514 | **921** |
| 23 | ಸಾರಿಗೆ | 30 | 209 | 1006 | 296 | 1541 | 314 | **1227** |
| 24 | ಆಹಾರ ಮತ್ತು ನಾಗರೀಕ ಸರಬರಾಜು | 11 | 75 | 1032 | 324 | 1442 | 492 | **950** |
| 25 | ಲೋಕೋಪಯೋಗಿ | 284 | -416 | 1047 | 493 | 1408 | 282 | **1126** |
| 26 | ನಗರಾಭಿವೃದ್ಧಿ | 268 | 55 | 522 | 69 | 914 | 397 | **517** |
| 27 | ಸಣ್ಣ ನೀರಾವರಿ | 111 | 113 | 483 | 162 | 869 | 154 | **715** |
| 28 | ಮೀನುಗಾರಿಕೆ | 11 | 84 | 97 | 646 | 838 | 303 | **535** |
| 29 | ಯೋಜನೆ, ಸಾಂಖ್ಯಿಕ , ವಿಜ್ಞಾನ ಮತ್ತು ತಂತ್ರಜ್ಞಾನ | 33 | -28 | 609 | 107 | 721 | 465 | **256** |
| 30 | ಗಣಿ | 14 | 128 | 319 | 195 | 656 | 221 | **435** |
| 31 | ಭಾರಿ ನೀರಾವರಿ | 89 | 5 | 365 | 150 | 609 | 294 | **315** |
| 32 | ಕನ್ನಡ ಮತ್ತು ಸಂಸ್ಕೃತಿ | 16 | 60 | 173 | 195 | 444 | 169 | **275** |
| 33 | ಸಂಸದೀಯ ವ್ಯವಹಾರಗಳು | 62 | 9 | 249 | 113 | 433 | 305 | **128** |
| 34 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 59 | 89 | 159 | 87 | 394 | 143 | **251** |
| 35 | ಪ್ರವಾಸೋದ್ಯಮ | 21 | 26 | 201 | 138 | 386 | 238 | **148** |
| 36 | ಸಣ್ಣ ಕೈಗಾರಿಕೆ | 20 | 46 | 251 | 43 | 360 | 107 | **253** |
| 37 | ವಾರ್ತಾ | 34 | 12 | 198 | 96 | 340 | 115 | **225** |
| 38 | ಯುವಜನ ಸೇವೆಗಳು | 12 | 20 | 94 | 86 | 212 | 171 | **41** |
| 39 | ಇಂದನ | 20 | 49 | 75 | 43 | 187 | 57 | **130** |
| 40 | ಇ - ಆಡಳಿತ | 45 | 25 | 3 | 0 | 73 | 369 | **-296** |
| 41 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 6 | 21 | 23 | 11 | 61 | 70 | **-9** |
| 42 | ಕೈಮಗ್ಗ ಮತ್ತು ಜವಳಿ | 3 | 2 | 31 | 8 | 44 | 28 | **16** |
| 43 | ಪರಿಸರ ಮತ್ತು ಜೀವಿಶಾಸ್ತ್ರ | 7 | 0 | 3 | 0 | 10 | 88 | **-78** |
| 44 | ವಸತಿ | 0 | 0 | 0 | 0 | 0 | 101 | **-101** |
| 45 | ಮೂಲಭೂತ ಸೌಕರ್ಯ | 0 | 0 | 0 | 0 | 0 | 143 | **-143** |
| | **ಒಟ್ಟು** | **16171** | **17180** | **172190** | **79340** | 284881 | **96844** | **188037** |

ಅನುಬಂಧ -೨

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2022ರ ಅಧಿನಿಯಮದನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚಿಸಲಾದ ಮೀಸಲಾತಿ ಪ್ರಮಾಣವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995
2. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2022, ದಿನಾಂಕ: 28.12.2022
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023, ದಿನಾಂಕ: 8.3.2023
5. ಸರ್ಕಾರದ ಆದೇಶ ಸಂಖ್ಯೆ ಸಕಇ 8 ಎಸ್‌ಎಲ್‌ಪಿ 2024 (ಭಾ-1), ದಿನಾಂಕ 25-08-2025
6. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 2 ಸೇಹಿಮ 2025, ದಿನಾಂಕ 03-09-2025
7. ಮಾನ್ಯ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 200448 /2025, 17968/2025 ಮತ್ತು 3145/2023ರಲ್ಲಿ ದಿನಾಂಕ 27.11.2025ರಂದು ನೀಡಿರುವ ಮಧ್ಯಂತರ ಆದೇಶ.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 20.06.1995ರ ಸರ್ಕಾರದ ಆದೇಶದಲ್ಲಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕ್ರಮವಾಗಿ ನಿಗಧಿಪಡಿಸಲಾಗಿದ್ದ ಶೇ15 ಮತ್ತು ಶೇ 3 ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ 100 ಬಿಂದುಗಳ ರೋಸ್ಟರನ್ನು ನಿಗಧಿಪಡಿಸಲಾಗಿರುತ್ತದೆ.

ಠ

2. ಮೇಲೆ (2) ರಲ್ಲಿ ಓದಲಾದ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಶೇ. 17 ಮತ್ತು ಶೇ.7 ರಂತೆ ಮೀಸಲಾತಿ ಪ್ರಮಾಣವನ್ನು ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

3. ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2022ರ ಅಧಿನಿಯಮದನ್ವಯ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

4. ಮೇಲೆ (4) ರಲ್ಲಿ ಓದಲಾದ ದಿನಾಂಕ 08.03.2023ರ ಸರ್ಕಾರದ ಆದೇಶದಲ್ಲಿ ಪ್ರತಿಯೊಂದು ನೇರ ಮೀಸಲಾತಿ ಪ್ರವರ್ಗದಡಿ (under each category of vertical reservation) ಮಾಜಿ ಸೈನಿಕ, ಅಂಗವಿಕಲ, ಮಹಿಳೆ, ಯೋಜನೆಗಳಿಂದ ನಿರ್ವಸಿತರಾದವರು, ಗ್ರಾಮೀಣ ಅಭ್ಯರ್ಥಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಮತ್ತು ತೃತೀಯ ಲಿಂಗಿಗಳಿಗೆ ಕಲ್ಪಿಸಲಾದ ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು 100 ಬಿಂದುಗಳ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

5. ಮೇಲೆ (5) ರಲ್ಲಿ ಓದಲಾದ ದಿನಾಂಕ 25.08.2025ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗಳೆಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಶೇಕಡ 17 ಮೀಸಲಾತಿಯನ್ನು ಪ್ರವರ್ಗ-ಎ ರಲ್ಲಿನ ಸಮುದಾಯಗಳಿಗೆ ಶೇಕಡ 6, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇಕಡ 6 ಮತ್ತು ಪ್ರವರ್ಗ-ಸಿ ರಲ್ಲಿನ ಸಮುದಾಯಗಳಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

24/02/2026

6. ಮೇಲೆ (6) ರಲ್ಲಿ ಓದಲಾದ ದಿನಾಂಕ 03.09.2025ರ ಸರ್ಕಾರದ ಆದೇಶದಲ್ಲಿ ದಿನಾಂಕ 28.12.2022ರ ಆದೇಶದಲ್ಲಿ ನಿಗದಿಪಡಿಸಲಾಗಿದ್ದ 100 ಬಿಂದುಗಳ ಮೀಸಲಾತಿ ರೋಸ್ಟರಿನಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಲಾಗಿರುವ 17 ಬಿಂದುಗಳನ್ನು ಮಾತ್ರ ಸದರಿ ಆದೇಶದದಲ್ಲಿರುವ ಅನುಬಂಧದಂತೆ ಪುನರ್ ವರ್ಗೀಕರಿಸಿ ಆದೇಶಿಸಲಾಗಿರುತ್ತದೆ.

7. ಮೇಲೆ (7)ರಲ್ಲಿ ಓದಲಾದ ಪ್ರಕರಣಗಳಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರನ್ವಯ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.15 ರಿಂದ ಶೇ.17ಕ್ಕೆ ಹಾಗೂ ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಲಾಗಿರುವುದನ್ನು ಪ್ರಶ್ನಿಸಲಾಗಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು **ದಿನಾಂಕ: 27.11.2025ರಂದು ಕೆಳಗಿನಂತೆ** ಮಧ್ಯಂತರ ಆದೇಶ ನೀಡಿರುತ್ತದೆ.

> 6. Considering that recruitment process has already begun pursuant to certain notifications specifying the enhanced reservation under the Karnataka Scheduled Castes and Scheduled Tribes (Reservation of Seats in Education Institutions and Appointments of Posts and Services under the State) Act, 2022 (hereafter Act), **we consider it apposite to modify our order dated 19.11.2025 to direct that no further notifications for recruitment or appointment on the basis of increased reservation would be issued till the disposal of the present petitions. The recruitment pursuant to the process that is already begun, may be continued. However, any appointment made shall be subject to the final outcome of the present petitions.**

8. ಮಾನ್ಯ ಉಚ್ಚ ನ್ಯಾಯಾಲಯವು ಮೇಲಿನಂತೆ ನೀಡಿರುವ ಮಧ್ಯಂತರ ಆದೇಶದಿಂದಾಗಿ ಹಲವಾರು ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ

ಸ್ಥಗಿತಗೊಂಡಿದ್ದು, ನಿರುದ್ಯೋಗಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿರುವುದರಿಂದ ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರೆಸಬೇಕಾಗಿರುವುದರಿಂದ ನೇಮಕಾತಿ ಅಧಿಸೂಚನೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಮೀಸಲಾತಿ ಪ್ರಮಾಣ ಶೇ.50ಕ್ಕೆ) ಹೊರಡಿಸುವುದು ಸೂಕ್ತವೆಂದು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2026,**

**ಬೆಂಗಳೂರು, ದಿನಾಂಕ: 27.02.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ, ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

1. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ, ದಿನಾಂಕ 27.11.2025ರ ನಂತರದಲ್ಲಿ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995ರನ್ವಯ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕೆ) ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸುವಂತೆ ಎಲ್ಲಾ ನೇಮಕಾತಿ/ಆಯ್ಕೆ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

2. ಈ ರೀತಿಯ ಆಯ್ಕೆಯನ್ನು ಹಿಂದಿನ ನೇಮಕಾತಿಯಲ್ಲಿ ಅಂದರೆ ದಿನಾಂಕ 28.12.2022ರ ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಯಾವ ಬಿಂದುವಿನಲ್ಲಿ

27/02/2026

ನಿಲ್ಲಿಸಲಾಗಿತ್ತೋ ಆ ಬಿಂದುವಿನ ಮುಂದಿನ ರೋಸ್ಟರ್ ಬಿಂದುವಿಗೆ ಸರಿಸಮವಾದ ಬಿಂದುವನ್ನು ದಿನಾಂಕ 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995ರಲ್ಲಿ ಗುರುತಿಸಿ ಅಲ್ಲಿಂದ ಪ್ರಾರಂಭಿಸಿ ಆಯ್ಕೆ ಮಾಡತಕ್ಕದ್ದು. (ಉದಾಹರಣೆಗೆ ಹಿಂದಿನ ನೇಮಕಾತಿಯಲ್ಲಿ ದಿನಾಂಕ 28.12.2022ರ ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಅನುಸಾರ 10 ನೇ ಬಿಂದುವಿನವರೆಗೆ ಪೂರ್ಣಗೊಳಿಸಲಾಗಿದ್ದಲ್ಲಿ, ಈಗ ಮಾಡಬೇಕಾಗಿರುವ ಆಯ್ಕೆಯನ್ನು ದಿನಾಂಕ 20.06.1995ರ ಆದೇಶದಲ್ಲಿನ ಅನುಬಂಧ-1ರ ರೋಸ್ಟರಿನ 11 ನೇ ಬಿಂದುವಿನಿಂದ ಪ್ರಾರಂಭಿಸಿ ಪೂರ್ಣಗೊಳಿಸತಕ್ಕದ್ದು).

3. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 27.11.2025ರ ಮಧ್ಯಂತರ ಆದೇಶಕ್ಕಿಂತ ಹಿಂದೆ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿರುವ ಪ್ರಕರಣಗಳನ್ನು ಯಥಾಪ್ರಕಾರ ಮುಂದುವರೆಸಿ, ಅಂತಿಮಗೊಳಿಸುವುದು ಹಾಗೂ ನೇಮಕಾತಿ ಆದೇಶದಲ್ಲಿ ಸ್ಪಷ್ಟವಾಗಿ ಈ ನೇಮಕಾತಿಯು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೊಳಪಟ್ಟಿರುತ್ತದೆಂದು ಷರಾ ದಾಖಲಿಸತಕ್ಕದ್ದು.

4. ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023, ದಿನಾಂಕ: 8.3.2023ರಲ್ಲಿ ನಿಗದಿಪಡಿಸಲಾಗಿರುವ ರೋಸ್ಟರ್ ಬಿಂದುಗಳನ್ನೇ ಮುಂದುವರೆಸುವುದು. ಹಿಂದಿನ ನೇಮಕಾತಿಯಲ್ಲಿ ದಿನಾಂಕ 08.03.2023 ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಯಾವ ಬಿಂದುವಿನಲ್ಲಿ ನಿಲ್ಲಿಸಲಾಗಿತ್ತೋ ಆ ಬಿಂದುವಿನ ಮುಂದಿನ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ ಆಯ್ಕೆ ಮಾಡತಕ್ಕದ್ದು.

5. ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಆಯಾ ಇಲಾಖೆಗಳು / ನೇಮಕಾತಿ ಪ್ರಾಧಿಕಾರಗಳು ಮುಂದಿನ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳಲ್ಲಿ ಶೇ 6 ರಷ್ಟು (ಪರಿಶಿಷ್ಟ ಜಾತಿಗೆ ಶೇ.2 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.4) ಹುದ್ದೆಗಳನ್ನು ಕಾಯ್ದಿರಿಸತಕ್ಕದ್ದು.

24/02/2026

6. ಮುಂದುವರೆದು, ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳಲ್ಲಿ ಸುಮಾರು 56432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಂದಿನ 30 ದಿನಗಳಲ್ಲಿ ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳಿಗೆ / ನೇಮಕಾತಿ ಪ್ರಾಧಿಕಾರಗಳಿಗೆ ತಿಳಿಸಿದೆ.

ಮೇಲಿನ ಸೂಚನೆಗಳು ಸರ್ಕಾರದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

27/02/2026
(ಆಶಾ ಕುಮಾರಿ ಎ. ಜಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ 50 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-ಎ), ಕೊಠಡಿ ಸಂಖ್ಯೆ-31, ವಿಧಾನಸೌಧ, ನೆಲಮಹಡಿ ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

7. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
8. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
9. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್/ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
17. ಸರ್ಕಾರದ ಅಪರ ಕಾರ್ಯದರ್ಶಿ (ಸಚಿವ ಸಂಪುಟ) (ಪ್ರಕರಣ ಸಂಖ್ಯೆ: ಸಿ.138/2026)
18. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
20. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

(*ಮುಖ ಪತ್ರದೊಂದಿಗೆ)

**ಅನುಬಂಧ-3**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1236 (1411)**

**2025-26 ನೇ ಸಾಲಿನಲ್ಲಿ ಆಯೋಜಿಸಿದ ನೇರ ಸಂದರ್ಶನ /ಮಿನಿ ಉದ್ಯೋಗ ಮೇಳಗಳ ಜಿಲ್ಲಾವಾರು ವಿವರ**

| ಕ್ರ. ಸಂ. | ಜಿಲ್ಲೆ | ಆಯೋಜಿಸಿದ ಕಾರ್ಯಕ್ರಮಗಳ ಸಂಖ್ಯೆ. | ಭಾಗವಹಿಸಿದ ನಿಯೋಜಕರ ಸಂಖ್ಯೆ. | ಹಾಜರಾದ ಅಭ್ಯರ್ಥಿಗಳು | | | ಉದ್ಯೋಗ ಆಹ್ವಾನ ಪತ್ರ ಪಡೆದವರು | | |
|---|---|---|---|---|---|---|---|---|---|
| | | | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| 1 | ಬೆಂಗಳೂರು | 6 | 122 | 739 | 585 | 1324 | 162 | 41 | 203 |
| 2 | ಚಿಕ್ಕಬಳ್ಳಾಪುರ | 15 | 46 | 667 | 430 | 1097 | 138 | 101 | 239 |
| 3 | ಚಿತ್ರದುರ್ಗ | 17 | 42 | 436 | 242 | 678 | 140 | 56 | 196 |
| 4 | ದಾವಣಗೆರೆ | 28 | 91 | 663 | 614 | 1277 | 138 | 126 | 264 |
| 5 | ಕೋಲಾರ | 17 | 33 | 286 | 193 | 479 | 151 | 85 | 236 |
| 6 | ರಾಮನಗರ | 15 | 15 | 78 | 146 | 224 | 45 | 35 | 80 |
| 7 | ಶಿವಮೊಗ್ಗ | 14 | 20 | 245 | 141 | 386 | 91 | 42 | 133 |
| 8 | ತುಮಕೂರು | 16 | 172 | 2975 | 2911 | 5886 | 1028 | 555 | 1583 |
| 9 | ಬಾಗಲಕೋಟೆ | 23 | 193 | 332 | 1852 | 2184 | 476 | 172 | 648 |
| 10 | ಬೆಳಗಾವಿ | 22 | 87 | 1522 | 786 | 2308 | 275 | 173 | 448 |
| 11 | ಧಾರವಾಡ | 15 | 131 | 1878 | 1499 | 3377 | 341 | 245 | 586 |
| 12 | ಗದಗ | 20 | 36 | 416 | 216 | 632 | 104 | 17 | 121 |
| 13 | ಹಾವೇರಿ | 21 | 31 | 1487 | 999 | 2486 | 171 | 52 | 223 |
| 14 | ಉತ್ತರ ಕನ್ನಡ | 17 | 17 | 147 | 81 | 228 | 61 | 29 | 90 |
| 15 | ವಿಜಯಪುರ | 18 | 50 | 1251 | 509 | 1760 | 162 | 69 | 231 |
| 16 | ಬಳ್ಳಾರಿ | 8 | 23 | 679 | 451 | 1130 | 110 | 39 | 149 |
| 17 | ಬೀದರ್ | 14 | 25 | 389 | 271 | 660 | 74 | 69 | 143 |
| 18 | ಕಲಬುರಗಿ | 30 | 154 | 1327 | 638 | 1965 | 241 | 69 | 310 |
| 19 | ಕೊಪ್ಪಳ | 22 | 88 | 1049 | 416 | 1465 | 255 | 83 | 338 |
| 20 | ರಾಯಚೂರು | 14 | 39 | 459 | 262 | 721 | 137 | 74 | 211 |
| 21 | ಯಾದಗಿರಿ | 11 | 23 | 520 | 143 | 663 | 139 | 36 | 175 |
| 22 | ಚಾಮರಾಜನಗರ | 10 | 36 | 756 | 842 | 1598 | 162 | 108 | 270 |
| 23 | ಚಿಕ್ಕಮಗಳೂರು | 28 | 42 | 295 | 188 | 483 | 109 | 43 | 152 |
| 24 | ದಕ್ಷಿಣ ಕನ್ನಡ | 31 | 60 | 642 | 398 | 1040 | 145 | 70 | 215 |
| 25 | ಹಾಸನ | 15 | 30 | 322 | 271 | 593 | 235 | 179 | 414 |
| 26 | ಕೊಡಗು | 15 | 41 | 305 | 252 | 557 | 112 | 73 | 185 |
| 27 | ಮಂಡ್ಯ | 20 | 52 | 493 | 634 | 1127 | 144 | 65 | 209 |
| 28 | ಮೈಸೂರು | 7 | 7 | 1236 | 737 | 1973 | 399 | 93 | 492 |
| 29 | ಉಡುಪಿ | 15 | 31 | 303 | 361 | 664 | 65 | 67 | 132 |
| | ಒಟ್ಟು:- | **504** | **1737** | **21897** | **17068** | **38965** | **5810** | **2866** | **8676** |

Umadevi.G

(ಜಿ.ಉಮಾದೇವಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ

**ಅನುಬಂಧ- 4**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1236 (1411)**

**ಡಿಡಿಯು ಜಿಕೆವೈ ಕಾರ್ಯಕ್ರಮದಡಿ ಪ್ರಸ್ತುತ 2025-26ನೇ ಸಾಲಿನಲ್ಲಿ ಆಯೋಜಿಸಲಾದ ಉದ್ಯೋಗಮೇಳಗಳ ವಿವರ**

| ಕ್ರ. ಸಂ. | ಜಿಲ್ಲೆ | ಆಯೋಜಿಸಲಾದ ಉದ್ಯೋಗ ಮೇಳಗಳ ಸಂಖ್ಯೆ (ಆರ್ಥಿಕವರ್ಷ - 2025-26) | ಉದ್ಯೋಗ ಮೇಳಗಳಲ್ಲಿ ನೋಂದಾಯಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|
| 1 | ಬಳ್ಳಾರಿ | 1 | 2346 | 1163 |
| 2 | ಬೆಳಗಾವಿ | 1 | 7613 | 338 |
| 3 | ಬೆಂಗಳೂರುದಕ್ಷಿಣ (ರಾಮನಗರ) | 1 | 9800 | 1392 |
| 4 | ಬೀದರ್ | 1 | 2242 | 292 |
| 5 | ಚಾಮರಾಜನಗರ | 1 | 1290 | 193 |
| 6 | ಚಿತ್ರದುರ್ಗ | 1 | 1569 | 227 |
| 7 | ದಕ್ಷಿಣಕನ್ನಡ | 1 | 4752 | 752 |
| 8 | ದಾವಣಗೆರೆ | 1 | 2000 | 421 |
| 9 | ಧಾರವಾಡ | 1 | 16500 | 719 |
| 10 | ಹಾವೇರಿ | 1 | 2035 | 758 |
| 11 | ಕಲಬುರಗಿ | 1 | 1609 | 188 |
| 12 | ಮಂಡ್ಯ | 1 | 3318 | 371 |
| 13 | ಮೈಸೂರು | 1 | 24000 | 1346 |
| 14 | ರಾಯಚೂರು | 1 | 14906 | 240 |
| 15 | ಶಿವಮೊಗ್ಗ | 1 | 2411 | 222 |
| 16 | ಉತ್ತರಕನ್ನಡ | 1 | 1735 | 345 |
| 17 | ವಿಜಯನಗರ | 1 | 6571 | 928 |
| 18 | ಯಾದಗಿರಿ | 1 | 1489 | 237 |
| | **ಒಟ್ಟು** | | **106186** | **10132** |

Umadevi G

(ಜಿ.ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

## ಅನುಬಂಧ-5
## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1236 (1411)
## ಉದ್ಯೋಗ ಮೇಳದ ಆಯೋಜನೆಯ ವಿವರಗಳು

| Sl. No | Year | District | Date | Total No. Participants Registered | No of Candidates Attended | No of Employer Registered | No of Employer Attended | Total No. of Candidates Shortlisted | Total No. of Candidates Selected |
|---|---|---|---|---|---|---|---|---|---|
| 1 | 2023-2024 | Sira | 11-09-2023 | 9786 | 4697 | 151 | 76 | 1393 | 450 |
| 2 | | Kalaburgi | 13-10-2023 | 7500 | 4925 | 146 | 103 | 1888 | 811 |
| 3 | | Bengaluru | 26-02-2024 & 27-02-2024 | 86451 | 44527 | 614 | 598 | 16865 | 9654 |
| 4 | 2024-2025 | Channapatna | 30-08-2024 | 10831 | 4218 | 222 | 201 | 1556 | 618 |
| 5 | | Bengaluru | 07-01-2025 & 08-01-2025 | 3492 | 2341 | 122 | 115 | 291 | 198 |
| 6 | | Kalaburagi | 16-04-2025 | 29090 | 10147 | 320 | 248 | 4448 | 1235 |
| 7 | | Rajajinagar | 20-10-2024 | 4025 | 900 | 177 | 55 | 212 | 50 |
| 8 | | Devanahalli | 13-09-2024 | 28070 | 12000 | 192 | 163 | 3500 | 1097 |
| 9 | | Udupi | 23-11-2024 | 576 | 250 | 63 | 44 | 664 | 30 |
| 10 | | Bangalore Urban | 19-03-2025 | 1126 | 621 | 108 | 80 | 355 | 173 |
| 11 | | Bagalkote | 19-03-2025 | 3496 | 2185 | 51 | 44 | 172 | 215 |
| 12 | | Bellary | 19-03-2025 | 2634 | 1695 | 46 | 41 | 781 | 343 |
| 13 | | Bidar | 19-03-2025 | 4946 | 1548 | 13 | 20 | 201 | 8 |
| 14 | | Chikmangalore | 19-03-2025 | 1928 | 1830 | 96 | 55 | 943 | 547 |
| 15 | | Udupi | 19-03-2025 | 2544 | 1804 | 41 | 34 | 353 | 433 |
| 16 | | Shimoga | 19-03-2025 | 3800 | 2778 | 45 | 39 | 683 | 324 |

| | | | | | | | | | |
|---|---|---|---|---|---|---|---|---|---|
| 17 | | Koppal | 19-03-2025 | 2594 | 1558 | 68 | 45 | 690 | 569 |
| 18 | | Mandya | 19-03-2025 | 2157 | 666 | 37 | 31 | 342 | 3 |
| 19 | | Tumkur | 19-03-2025 | 5982 | 4142 | 72 | 72 | 1519 | 484 |
| 20 | | Chitradurga | 19-03-2025 | 1662 | 1662 | 54 | 48 | 557 | 272 |
| 21 | | Gadag | 19-03-2025 | 7947 | 4089 | 69 | 67 | 1067 | 827 |
| 22 | | Raichur | 19-03-2025 | 6196 | 2136 | 65 | 65 | 820 | 693 |
| 23 | | Dharwad | 19-03-2025 | 5821 | 3000 | 130 | 118 | 3149 | 532 |
| 24 | | Mysore | 19-03-2025 | 836 | 836 | 62 | 62 | 200 | 288 |
| 25 | | Haveri | 19-03-2025 | 1579 | 1336 | 56 | 49 | 723 | 446 |
| 26 | | Davangere | 19-03-2025 | 9843 | 4643 | 64 | 76 | 1160 | 1310 |
| 27 | 2025-2026 | Mysore | 17-10-2025 | 43275 | 13,289 | 331 | 235 | 3303 | 1346 |
| 28 | | Tumkur | 14-11-2025 | 9529 | 5,371 | 75 | 48 | 481 | 560 |
| 29 | | Haveri | 15-11-2025 | 1983 | 2,958 | 56 | 40 | 1445 | 843 |
| 30 | | Chitradurga | 01-02-2026 | 6248 | 1,269 | 84 | 57 | 627 | 224 |
| 31 | | Vijayapura | 02-02-2026 | 25,356 | 11,713 | 160 | 141 | 4313 | 2074 |
| | | **TOTAL** | | **3,31,303** | **1,55,134** | **3,790** | **3,070** | **54,701** | **26,657** |

Umadevi.G

(ಜಿ.ಉಮಾದೇವಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ.

**ಅನುಬಂಧ-6**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1236 (1411)**

**ILC & Future Skills ಕಾರ್ಯಕ್ರಮದ ಮುಖೇನ ಕಾರ್ಯಾದೇಶ ನೀಡಿರುವ ತರಬೇತಿಗಳ ವಿವರ :**

| ಕ್ರಮ ಸಂಖ್ಯೆ | ಜಿಲ್ಲೆ | ತರಬೇತಿ ನೀಡುವ ಕೈಗಾರಿಕೆ ಸಂಸ್ಥೆಯ ಸಂಖ್ಯೆ | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 01 | ಬೆಳಗಾಂ | 1 | 120 |
| 02 | ಬೆಂಗಳೂರುನಗರ | 9 | 1710 |
| 03 | ಚಿತ್ರದುರ್ಗ | 1 | 60 |
| 04 | ಧಾರವಾಡ | 1 | 60 |
| 05 | ಕಲಬುರಗಿ | 3 | 450 |
| 06 | ಕೊಡಗು | 1 | 60 |
| 07 | ಕೊಪ್ಪಳ | 2 | 390 |
| 08 | ಮೈಸೂರು | 1 | 60 |
| 09 | ರಾಮನಗರ | 1 | 360 |
| 10 | ಶಿವಮೊಗ್ಗ | 1 | 60 |
| 11 | ಉಡುಪಿ | 1 | 180 |
| **ಒಟ್ಟು** | | **22** | **3510** |

**ಖಾಸಗಿ ತರಬೇತಿದಾರ ಸಂಸ್ಥೆಗಳ (VTP) ಕಾರ್ಯಕ್ರಮದ ಮುಖೇನ ಕಾರ್ಯಾದೇಶ ನೀಡಿರುವ ತರಬೇತಿಗಳ ವಿವರ :**

| ಕ್ರಮ ಸಂಖ್ಯೆ | ಜಿಲ್ಲೆ | ತರಬೇತಿ ನೀಡುವ ಸಂಸ್ಥೆಯ ಸಂಖ್ಯೆ | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 01 | ಬೆಂಗಳೂರು ನಗರ | 2 | 150 |
| 02 | ಧಾರವಾಡ | 1 | 60 |
| 03 | ಗದಗ | 2 | 180 |
| 04 | ಹಾವೇರಿ | 3 | 240 |
| 05 | ಕಲಬುರಗಿ | 1 | 60 |
| 06 | ಕೋಲಾರ | 1 | 90 |
| 07 | ಕೊಪ್ಪಳ | 1 | 60 |
| 08 | ಮೈಸೂರು | 2 | 420 |
| 09 | ರಾಯಚೂರು | 2 | 150 |
| 10 | ಶಿವಮೊಗ್ಗ | 1 | 60 |
| 11 | ವಿಜಯಪುರ | 3 | 240 |
| 12 | ಯಾದಗಿರಿ | 2 | 120 |
| ಒಟ್ಟು | | **21** | **1830** |

**ಸರ್ಕಾರಿ ತರಬೇತಿ ಸಂಸ್ಥೆಗಳ ಕಾರ್ಯಕ್ರಮದ ಮುಖೇನ ಕಾರ್ಯಾದೇಶ ನೀಡಿರುವ ತರಬೇತಿಗಳ ವಿವರ :**

| ಕ್ರಮ ಸಂಖ್ಯೆ | ಸರ್ಕಾರಿ ತರಬೇತಿ ಸಂಸ್ಥೆಗಳ ವಿವರ | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|
| 01 | ಜಿ.ಟಿ.ಟಿ.ಸಿ | 1900 |
| 02 | ಕೆ.ಜಿ.ಟಿ.ಟಿ.ಐ | 1420 |
| 03 | ಐ.ಟಿ.ಐ | 1900 |
| 04 | ಮೋಕ್ಷಗುಂಡಂ | 810 |
| 05 | ಇತರೆ (KSOU, ಸಿಡಾಕ್, BSNL) | 3370 |
| **ಒಟ್ಟು** | | **9400** |

Umadevi.G

(ಜಿ.ಉಮಾದೇವಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ.